ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಸೋಮವಾರ, ದಿನಾಂಕ : 21 ನೇ ಸೆಪ್ಟೆಂಬರ್, 2020

ಕರೋನಾ ಸಂಬಂಧವಾಗಿ ಖರೀದಿಸಲಾದ ವಿವಿಧ ಸಾಮಗ್ರಿಗಳ ಬಗ್ಗೆ

ಶ್ರೀ ಎಂ. ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) -

ಶ್ರೀ ಪಿ. ಆರ್. ರಮೇಶ್(ನಾಮನಿರ್ದೇಶನ ಹೊಂದಿದವರು) -

05 (112+113) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಕರೋನಾ ಸಂಬಂಧವಾಗಿ ಖರೀದಿಸಿದ ಪಿಪಿಇ ಕಿಟ್, ವೆಂಟಿಲೇಟರ್, ಸ್ಯಾನಿಟೈಜರ್, ಔಷಧಿಗಳು, ಟೆಸ್ಟ್ ಕಿಟ್‌ಗಳು, ಮಾಸ್ಕ್ ಗಳು, ಅಂಬ್ಯುಲೆನ್ಸ್ ಹಾಗೂ ಇತರೆ ಖಾಸಗಿ ಸೇವೆಗಳನ್ನು ಹೇಗೆ ಪಡೆಯಲಾಗಿದೆ/ ಖರೀದಿಸಲಾಗಿದೆ; ಟೆಂಡರ್ ಕರೆಯಲಾಗಿದೆಯೇ; ಅಥವಾ ಕೊಟೇಷನ್ ಕರೆಯಲಾಗಿದೆಯೇ;

(ಆ) ಉತ್ಪಾದಕರಿಂದ ಖರೀದಿ ಮಾಡಲಾಗಿದೆಯೇ; ಸರಬರಾಜುದಾರರಾಗಿದ್ದಲ್ಲಿ ಅವರುಗಳು ಯಾರು ಯಾರು; (ಹಿಂದೆ ಸರಬರಾಜು ಮಾಡಿದ ವಿವರಗಳನ್ನು ಕಂಪನಿವಾರು ಸಾಮಾಗ್ರಿವಾರು, ಸರಬರಾಜು ಮಾಡಿದ ದಿನಾಂಕವಾರು ಮಾಹಿತಿ ನೀಡುವುದು)

(ಇ) ಸಾಮಾಗ್ರಿಗಳನ್ನು ಸರಬರಾಜು ಮಾಡಿದ ಕಂಪನಿಗಳಲ್ಲಿ ವೈದ್ಯಕೀಯ ರಂಗದಲ್ಲಿ ಅನುಭವವಿಲ್ಲದ ಕಂಪನಿಗಳೆಷ್ಟು; ಸಾಫ್ಟ್ ವೇರ್ ತಯಾರಿಕೆ, ಕೃಷಿ ಮುಂತಾದ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡ ಕಂಪನಿಗಳು ಹೇಗೆ ಕರೋನಾ ಸಂಬಂಧಿತ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಸಾಧ್ಯ; ಖಾಸಗಿ ಸಂಸ್ಥೆಗಳಿಗೆ ವೈದ್ಯಕೀಯ ಸಲಕರಣೆಗಳು ಹಾಗೂ ಸೇವೆಗಳ ಸರಬರಾಜು ಮಾಡುವಂತೆ ನೀಡಲಾದ ಖರೀದಿ ಆದೇಶಗಳ (Purchase/Work Order) ಮಾಹಿತಿ ನೀಡುವುದು;

(ಈ) ಸರ್ಕಾರಕ್ಕೆ ಸರಬರಾಜು ಮಾಡಿದ ಕಂಪನಿಗಳು ಜಿ.ಎಸ್.ಟಿ. ನೋಂದಣಿ ಪತ್ರ ಮತ್ತು ಜಿ.ಎಸ್.ಟಿ.ಗೆ ರಿಟರ್ನ್ಸ್ ಸಲ್ಲಿಸಿರುವ ಆರ್-3 ನಮೂನೆಯನ್ನು ಸಲ್ಲಿಸಲಾಗಿದೆಯೇ; (ಮಾಹಿತಿಗಳನ್ನು ಒದಗಿಸುವುದು)

(ಉ) ಕರೋನಾ ಮಹಾಮಾರಿ ಹರಡದಂತೆ ಕ್ರಮಕೈಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮೀಣ ಜಿಲ್ಲೆಗಳ ವ್ಯಾಪ್ತಿಗೆ ಆರೋಗ್ಯ ಇಲಾಖೆಯಿಂದ ಎಷ್ಟು ಅನುದಾನ ಬಿಡುಗಡೆಯಾಗಿದೆ; (ಮಾಹಿತಿ ನೀಡುವುದು)

(ಊ) ಈ ಮಹಾಮಾರಿ ತಡೆಯಲು/ನಿಯಂತ್ರಿಸಲು ಕೈಗೊಂಡ ಕ್ರಮಗಳೇನು; ಹಾಗೂ ಕೇಂದ್ರದಿಂದ ಬಂದ ಅನುದಾನವೆಷ್ಟು;

(ಋ) ಬೆಂಗಳೂರು ನಗರದಲ್ಲಿ BIEC ಕೋವಿಡ್ ಕೇಂದ್ರ ಸ್ಥಾಪನೆಗೆ ಖರ್ಚಾದ ಅನುದಾನವೆಷ್ಟು; ಮತ್ತು ಸದರಿ ಕೇಂದ್ರದಲ್ಲಿ ಚಿಕಿತ್ಸೆ ಪಡೆದವರ ಸಂಖ್ಯೆ ಎಷ್ಟು?(ವಿವರ ನೀಡುವುದು)